ಸಾಕ್ಷಿಯನ್ನು ದಿ: 10.09.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ಪಿರ್ಯಾದುದಾರರ ಪರ ವಕೀಲರಿಂದ ಃ-**

1. ನಿಪಿ.1 ರ ಚೆಕ್ಕಿನ ಖಾತೆಗೆ ಸಂಬಂಧಪಟ್ಟಂತೆ ಸಂಪೂರ್ಣ ವ್ಯವಹಾರದ ವಿವರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ನನ್ನ ಖಾತೆಗೆ ಸಂಬಂಧಪಟ್ಟಂತೆ ಎಷ್ಟು ಚೆಕ್ಕುಗಳನ್ನು ಬೇರೆಯವರಿಗೆ ಕೊಟ್ಟಿರುತ್ತೇನೆ ಮತ್ತು ಎಷ್ಟು ಚೆಕ್ಕುಗಳ ಮುಖಾಂತರ ವ್ಯವಹಾರ ಮಾಡಿರುತ್ತೇನೆಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ಸಾಕ್ಷಿಗೆ ಒಂದು ದೃಢೀಕೃತ ಚೆಕ್ಕನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ.9 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಿಸಿ 339/2019 ರ ತೀರ್ಪಿನ ಪ್ರತಿ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ನಿಪಿ.10 ರ ತೀರ್ಪಿನಲ್ಲಿ ನನ್ನನ್ನು ತಪ್ಪಿತಸ್ಥಳೆಂದು ಆದೇಶಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ಸಿಸಿ 7290/2013 ರ ಎಫ್.ಐ.ಆರ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ.11 ಎಂದು ಗುರುತಿಸಲಾಯಿತು. ನಿಪಿ.11 ನ್ನು ನನ್ನ ಗಂಡ ಮತ್ತು ಮಗನ ವಿರುದ್ದ ದಾಖಲು ಮಾಡಲಾಗಿದೆ ಎಂದರೆ ಸರಿ. ನಿಪಿ.11 ರ ಪ್ರಕರಣವನ್ನು ನನ್ನ ಮಗ ಹಣ ದುರ್ಬಳಕೆ ಮಾಡಿಕೊಂಡು ಸದರಿ ದುರ್ಬಳಕೆ ಮಾಡಿದ ಹಣವನ್ನು ನನ್ನ ಗಂಡನ ಖಾತೆಗೆ ಜಮಾ ಮಾಡಿದ್ದಾನೆಂದು ದಾಖಲು ಮಾಡಿದ್ದಾರೆಂದರೆ ಸರಿ. ಸಾಕ್ಷಿಗೆ ಸಿಸಿ 7290/2013 ರ ದೋಷಾರೋಪಣ ಪಟ್ಟಿ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ನಿಪಿ.11 ಮತ್ತು 12 ರ ಪ್ರಕರಣದಲ್ಲಿ ನಾನು ಮತ್ತು ಇನ್ನೊಬ್ಬ ಜಾಮೀನು ಕೊಟ್ಟಿರುತ್ತೇವೆಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪ್ರಕರಣ ಮುಕ್ತಾಯವಾಗಿದೆ ಎಂದು ನುಡಿಯುತ್ತಾರೆ. ನಿಪಿ.12 ರ ಪ್ರಕರಣ ಮುಕ್ತಾಯವಾದ ಕುರಿತು ತೀರ್ಪನ್ನು ಹಾಜರು ಪಡಿಸಿಲ್ಲ. ಸಾಕ್ಷಿಗೆ ಅಸಲು ದಾವಾ ಸಂಃ 3739/2013 ರ ರೋಜನಾಮೆ ಮತ್ತು ವಾದಪತ್ರದ ದೃಢೀಕೃತ ಪ್ರತಿ ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಪಿ.13 ಮತ್ತು 14 ಎಂದು ಗುರುತಿಸಲಾಯಿತು. ನಿಪಿ.13 ರ ಪ್ರಕರಣವನ್ನು ನನ್ನ ಗಂಡ ಹಾಗೂ ಮಗನ ವಿರುದ್ದ ಹಣ ವಸೂಲಾತಿಗಾಗಿ ಸಲ್ಲಿಸಲಾಗಿದೆ ಎಂದರೆ ಸರಿ. ನಿಡಿ.1 ಮತ್ತು 3 ರ ಸಂಪಾದಕರು ಮತ್ತು ವರದಿಗಾರರು ನನಗೆ ಗೊತ್ತು ಎಂದರೆ ಸರಿ. ನಿಡಿ.1 ಮತ್ತು 3 ನ್ನು ಪ್ರಚುರ ಪಡಿಸುವ ಪೂರ್ವದಲ್ಲಿ ನಾನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಯಾವುದೇ ದೂರು ಸಲ್ಲಿಸಿಲ್ಲ. ನಿಡಿ.1

ಮತ್ತು 3 ನ್ನು ಬೇರೆಯವರು ಹಾಕಿಸಿರುತ್ತಾರೆ. ನಿಡಿ.1 ರಲ್ಲಿ ನನ್ನ ಮತ್ತು ಪಿರ್ಯಾದುದಾರನ ಅಣ್ಣನ ಫೋಟೋಗಳು ಇರುತ್ತವೆ ಎಂದರೆ ಸರಿ. ಪಿರ್ಯಾದುದಾರನ ಅಣ್ಣ ಮಲೈ ಮಹದೇಶ್ವರ ಬೆಟ್ಟದಲ್ಲಿ ಕನ್ನಡ ಬೆರಳಚ್ಚುಗಾರರಾಗಿರುತ್ತಾರೆ, ನಾನು ಇಂಗ್ಲಿಷ್ ಬೆರಳಚ್ಚುಗಾರಳಾಗಿರುತ್ತೇನೆಂದರೆ ಸರಿ. ಪಿರ್ಯಾದುದಾರನ ಅಣ್ಣನಿಗೂ ಮತ್ತು ನನಗೂ ಸುಮಾರು 12 ವರ್ಷಗಳಿಂದ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿ. ಪಿರ್ಯಾದುದಾರರ ಅಣ್ಣನ ವಿರುದ್ದ ಯಾವುದಾದರೂ ದೂರು ದಾಖಲಾಗಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಪಿರ್ಯಾದುದಾರರ ಮೇಲೆ ಒತ್ತಡ ಹಾಕಲ ಅನಾವಶ್ಯಕವಾಗಿ ನಿಡಿ.1 ಮತ್ತು 3 ರವರ ಪ್ರಕರಣೆಯನ್ನು ಮಾಡಿಸಿರುತ್ತೇನೆಂದರೆ ಸರಿಯಲ್ಲ. ನಿಡಿ.4 ರಲ್ಲಿ ನಿಪಿ.1 ರ ಚೆಕ್ಕು ಸಂಖ್ಯೆ ಇರುವುದಿಲ್ಲ ಎಂದರೆ ಸರಿ. ನಿಡಿ.5  ಈ ಪ್ರಕರಣ ದಾಖಲು ಮಾಡಿದ ನಂತರ ಪಡೆದುಕೊಂಡಿರುತ್ತೇನೆಂದರೆ ಸರಿ. ನಾನು ನಿಡಿ.5 ರ ದೂರಿನ ಪ್ರತಿ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಡಿ.1, 3 ರಿಂದ 5 ರಲ್ಲಿ ಪಿರ್ಯಾದುದಾರರನ ಬಗ್ಗೆ ಯಾವುದೇ ಪ್ರಸ್ತಾಪ ಇರುವುದಿಲ್ಲ ಎಂದರೆ ಸರಿ. ನಿಡಿ.6 ರಿಂದ 8 ರ ಪ್ರಕರಣದ ಪಿರ್ಯಾದುದಾರನ ವಿರುದ್ದ ನಾನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ. ನಿಡಿ.1 ರಿಂದ 8 ರವರೆಗಿನ ದಾಖಲಾತಿಗೂ ಮತ್ತು ಪಿರ್ಯಾದುದಾರರಿಗೂ ಯಾವುದೇ ಸಂಬಂಧವಿಲ್ಲದ್ದರೂ ಸಹ ಸಂಬಂಧವಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಹಣ ವಾಪಸ್ಸು ಕೊಡಬೇಕಾಗುತ್ತದೆಂದು ಸುಳ್ಳು ಪ್ರತ್ಯುತ್ತರ ನೋಟೀಸು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಾಲ ತೀರುವಳಿಗಾಗಿ ನಿಪಿ.1 ನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ.